ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ-2/2014-15**

ದಿನಾಂಕ: 14 NOV 2018

## ಸುತ್ತೋಲೆ

**ವಿಷಯ:** ಕಿರಿಯ ಇಂಜನಿಯರ್(ವಿ) ಹುದ್ದೆಗೆ ಬಡ್ತಿ ನೀಡುವಾಗ ನೌಕರರನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವ ಕುರಿತು.

**ಉಲ್ಲೇಖ:**
1. ನಿಗಮದ ದಿನಾಂಕ: 19.06.2015 ರ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ-2/2014-15.
2. ನಿಗಮದ ದಿನಾಂಕ: 10.05.2017 ರ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ-2/2014-15.
3. ನಿಗಮದ ದಿನಾಂಕ: 14.03.2018 ರ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ-2/2014-15.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (659), ಬೆಂಗಳೂರು ರವರ ದಿನಾಂಕ: 28.07.2018 ರ ಪತ್ರ ಸಂಖ್ಯೆ ಕವಿಪ್ರನಿನೌಸಂ/216/18-19.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಪರೇಟರ್/ಮಾಪಕ ಓದುಗ/ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಿಂದ ಕಿರಿಯ ಇಂಜನಿಯರ್(ವಿ) ಹುದ್ದೆಯ ಬಡ್ತಿಗೆ ಪರಿಗಣಿಸುವಾಗ, ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆಯ ಆಧಾರದ ಮೇಲೆ ನೇರ ನೇಮಕ ಹೊಂದಿರುವ ನೌಕರರನ್ನು ಶೇಕಡ 17.5 ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವಂತೆ ನಿಗಮದ ದಿನಾಂಕ: 10.05.2017 ರ ಸುತ್ತೋಲೆಯಲ್ಲಿ ಈಗಾಗಲೇ ಸ್ಪಷ್ಟೀಕರಿಸಲಾಗಿರುತ್ತದೆ.

ದಿನಾಂಕ: 19.06.2015 ರ ಸ್ಪಷ್ಟೀಕರಣದ ನಂತರ ಹಾಗೂ ದಿನಾಂಕ: 10.05.2017 ರ ಸುತ್ತೋಲೆಯನ್ನು ಹೊರಡಿಸುವ ಮುನ್ನ ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆಯ ಮೇರೆಗೆ ನೇರ ನೇಮಕ ಹೊಂದಿ ಎಕ್ಸಿಕ್ಯೂಟಿವ್ ಲೋಯರ್ ಇಲಾಖಾ ಪರೀಕ್ಷೆಯಲ್ಲಿ ಉತೀರ್ಣರಾದ ನೌಕರರನ್ನು ನಿಗಮದ ನೌಕರಿ ಭರ್ತಿ ಮತ್ತು ಬಡ್ತಿ ನಿಯಮಗಳ ಪ್ರಕಾರ ಕಿರಿಯ ಇಂಜನಿಯರ್(ವಿ) ಹುದ್ದೆಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳುವಂತೆ ಹಾಗೂ ಸದರಿ ನೌಕರರನ್ನು ಇನ್ನು ಮುಂದೆ ತಾಂತ್ರಿಕ ಕೋಟಾದಡಿಯಲ್ಲಿಯೇ ಪರಿಗಣಿಸುವಂತೆ ನಿಗಮದ ದಿನಾಂಕ: 14.03.2018 ರ ಸುತ್ತೋಲೆಯಲ್ಲಿ ಸ್ಪಷ್ಟೀಕರಿಸಲಾಗಿರುತ್ತದೆ.

ಮುಂದುವರೆದು, ಜೆಓಡಿಸಿ ವಿದ್ಯಾರ್ಹತೆಯು ತಾಂತ್ರಿಕ ವಿಷಯವನ್ನೊಳಗೊಂಡಿದ್ದು, ಈ ಹಿಂದೆ ಸದರಿ ವಿದ್ಯಾರ್ಹತೆಯ ಆಧಾರದ ಮೇಲೆ ಮಾಪಕ ಓದುಗ ಹುದ್ದೆಗೆ ನೇರ ನೇಮಕಾತಿ ಮಾಡಲಾಗಿರುತ್ತದೆ. ಆದ್ದರಿಂದ ಜೆಓಡಿಸಿ ವಿದ್ಯಾರ್ಹತೆಯ ಆಧಾರದ ಮೇಲೆ ನೇರ ನೇಮಕಾತಿ ಹೊಂದಿದ ನೌಕರರನ್ನು ತಾಂತ್ರಿಕ ಕೋಟಾದಲ್ಲಿ ಪರಿಗಣಿಸಬೇಕಿರುತ್ತದೆ. ಆದ್ದರಿಂದ ಆಪರೇಟರ್/ಮಾಪಕ ಓದುಗ/ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಿಂದ ಕಿರಿಯ ಇಂಜನಿಯರ್(ವಿ) ಹುದ್ದೆಯ ಬಡ್ತಿಗೆ ಪರಿಗಣಿಸುವಾಗ, ಜೆ.ಓ.ಡಿ.ಸಿ ವಿದ್ಯಾರ್ಹತೆಯ ಆಧಾರದ ಮೇಲೆ ನೇರ ನೇಮಕ ಹೊಂದಿರುವ ನೌಕರರನ್ನು ಶೇಕಡ 17.5 ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವಂತೆ ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ನಿರ್ದೇಶಕರು,
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:
1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.

2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
6. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ.
7. ಆಪ್ತ ಕಾರ್ಯದರ್ಶಿಗಳು ಸಿಸಿಎಫ್, ಕವಿಪ್ರನಿನಿ.

www.kptcl.com/eprasarana for information of:

8. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
9. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
10. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>

1. ಶ್ರೀ.ರಾಮಕೃಷ್ಣಯ್ಯ.ಟಿ.ಆರ್, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.